ಸಿ.ಸಿ. ನಂ. 3100/2022
ಸಿ.ಡಬ್ಲ್ಯೂ-21
ಪಿ.ಡಬ್ಲ್ಯೂ-01

## ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಬಸವಕಲ್ಯಾಣ

ದಿನಾಂಕ **28-11-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಜಾಯಪ್ಪ |
| ತಂದೆಯ ಹೆಸರು | : | ಶರಣಪ್ಪ |
| ವಯಸ್ಸು | : | **46** ವರ್ಷಗಳು, |
| ಉದ್ಯೋಗ | : | ಡಿ.ವಾಯ.ಎಸ.ಪಿ |
| ವಾಸ ಸ್ಥಳ | : | ವಿಜಯಪೂರ |

<u>ಸಹಾಯಕ ಸರ್ಕಾರಿ ಅಭಿಯೋಜಕರಿಂದ ಸಾಕ್ಷಿಯ ಮುಖ್ಯ ವಿಚಾರಣೆ:</u>

ದಿನಾಂಕ 29-2-2020 ರಿಂದ 05-09-2021 ರ ವರೆಗೆ ಬಸವಕಲ್ಯಾಣದಲ್ಲಿ ಸಿಪಿಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 05-08-2021 ರಂದು ಚಾಸಾ-19 ಅವರಿಂದ ಕಡತವನ್ನು ಪಡೆದುಕೊಂಡುಪರಿಶೀಲನೆ ಮಾಡಿಕೊಂಡಿರುತ್ತೇನೆ.

ನಂತರ ಗಟನಾ ಸ್ಥಳಕ್ಕೆ ಬೇಟಿ ನೀಡಿ ಗಟನಾ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ಅವರ ಸಮಕ್ಷಮ ಮಾಡಿ1 ರಿಂದ 2 ಗಂಟೆಯವರೆಗೆ ಮುಗಿಸಿ ಸ್ಥಳದಲ್ಲಿ ಹಾತನಕಾಶೆ ಮತ್ತು ಪೋಟೋ ತೆಗೆಯಲಾಯಿತು. ಸ್ಥಳದಲ್ಲಿ ಯಾವುದೇ ಗುರುತುಗಳು ಇರುವುದಿಲ್ಲ.

ದಿನಾಂಕ 12-8-2021 ರಂದು ಚಾಸಾ-6 ದ್ವಿಚಕ್ರ ವಾಹನ ಸಂಃ ಕೆಎ-56-ಜೆ-8039 ಅನ್ನು ಹಾಜರುಪಡಿಸಿದ್ದು ಚಾಸಾ-4 ಮತ್ತು 5 ಅವರ ಸಮಕ್ಷಮ ಜಪ್ತು ಪಂಚನಾಮೆಯನ್ನು 3 ರಿಂದ 3-45 ರ ವರೆಗೆ ಮಾಡಿ ಮುಗಿಸಿ ವಾಹನ ತಪಾಸಣಾ ವರದಿ ಕುರಿತು ಜಪ್ತು ಮಾಡಿಕೊಂಡಿರುತ್ತೇನೆ. ಸ್ಥಳದಲ್ಲಿ ಪೋಟೋ ತೆಗೆಯಲಾಯಿತು. ಸದರೀ ವಾಹನಕ್ಕೆ ಯಾವುದೇ ಜಖಂಗಳು ಕಂಡು ಬಂದಿರುವುದಿಲ್ಲ. ಈ ಬಗ್ಗೆ ಚಾಸಾ-6 ಅವರನ್ನು ವಿಚಾರಿಸಲಾಗಿ ಅವರು ಯಾವುದೇ ಉತ್ತರ ನೀಡಿರುವುದಿಲ್ಲ. ಆದಕಾರಣ ಸಂಶಾಯಾಸ್ಪದದಿಂದ 41-ಎ ಅಡಿಯಲ್ಲಿ ನೋಟಿಸು ನೀಡಿ ಮುಂದಿನ ದಿನಾಂಕಕ್ಕೆ ಬರಲು ತಿಳಿಸಲಾಯಿತು.

ನಂತರ ದಿನಾಂಕ 19-8-2021 ರಂದು ಐಎಮವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವಾಹನ ತಪಾಸಣಾ ವರದಿಯಲ್ಲು ಸಹ ಯಾವುದೇ ಜಖಂಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ನಂತರ ದಿನಾಂಕ 5-9-2021 ರಂದು ನನಗೆ ವರ್ಗಾವಣೆಯಾದ ಪ್ರಯುಕ್ತ ಚಾಸಾ-22 ಅವರಿಗೆ ಕಡತವನ್ನು ಹಸ್ತಾಂತರಿಸಲಾಯಿತು. ಆರೋಪಿಯನ್ನು ಗುರುತಿಸುತ್ತೇನೆ.

ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ಜಪ್ತುಪಂಚನಾಮೆ ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ಸಹಿ ನಿಪಿ-3(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು -ಆರೋಪಿ ಪರವಾಗಿ ಶ್ರೀ **RSM** ವಕೀಲರಿಂದಃ</u>

ನಾನು ಗಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಜಪ್ತು ಪಂಚನಾಮೆಯನ್ನು ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎಫಐಆರ ನ ಅಪಗಾತ ದಿನ ದಿನಾಂಕ 15-7-2021 ಮದ್ಯಾಹ್ನ 2-30 ರಿಂದ 2-31 ಎಂದು ತೋರಿಸಲಾಗಿದೆ. ಪಿಜಿಐ ಪೂನಾ ಆಸ್ಪತ್ರೆಯವರು ನಮಗೆ ನೀಡಿದ ಎಮಎಲಸಿ ಆಧಾರದ ಮೇಲೆ ಕೇಸನ್ನು ದಾಖಲು ಮಾಡಿದ್ದು ಅಲ್ಲಿಯವರೆಗೆ ಪ್ರಕರಣದ ಕುರಿತು ಯಾರು ಸಹ ದೂರನ್ನು ನೀಡಿರುವುದಿಲ್ಲ. ನಾನು ಎಮಎಲಸಿ ಯನ್ನು ನೋಡಿರುತ್ತೇನೆ. ಎಮಎಲಸಿ ಯಲ್ಲಿ ದಿನಾಂಕ 16-7-2021 ರಂದು 2-30 ಗಂಟೆಗೆ ಅಫಗಾತವಾಗಿದೆಯೆಂದು ತೋರಿಸಲಾಗಿದೆಯೆಂದರೆ ಸರಿ. ದಿನಾಂಕ ತಪ್ಪಾಗಿ ನಮೂದು ಆದ ಬಗ್ಗೆ ಎಎಸಐ ಅವರು ವಿಚಾರಣೆ ಮಾಡಿದ್ದು ಈ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಆದರೇ ಆಸ್ಪತ್ರೆಯವರು ದಿನಾಂಕ 16-7-2021 ರಂದು ಎಂದು ತಿಳಿಸಿದ್ದು ಪಿರ್ಯಾದಿ ಅವಸರದಿಂದ ತಪ್ಪಾಗಿ ದಿನಾಂಕ ನಮೂದು ಮಾಡಿದ್ದಾರೆಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ಈ ಕುರಿತು ನಮ್ಮ ಸಿ.ಡಿ ಯಲ್ಲಿ ನಮೂದು ಮಾಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).**

**(ಓ.ಹೇ.ಕೇ.ಸ.ಇದೆ)**

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ